# ಆರಿದ್ದರೇನಯ್ಯ ನೀನಲ್ಲದೆನಗಿಲ್ಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 89.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 198.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 483.
4. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 250.
5. **Note:** Lyrics given here are as per Ref. 1. The wordings in other references are same as in Ref. 1 with few minor changes which are not considered here.
6. **Note:** Few major changes which are not considered here: The first line: in Ref. 3 this is given as "yAridarEnayya nInilladenagilla". This is not considered here. And the Ankita in Ref. 4 is different, which is not considered here.
7. **Note:** Singer has followed these lyrics.

ರಾಗ: ಮುಖಾರಿ ತಾಳ: ಝಂಪೆ

ಆರಿದ್ದರೇನಯ್ಯ ನೀನಲ್ಲದೆನಗಿಲ್ಲ
ಕಾರುಣ್ಯನಿಧಿ ಹರಿಯೆ ಕೈಯ ಬಿಡಬೇಡ || ಪ ||

ದುರುಳ ಕೌರವನಂದು ದ್ರುಪದಜೆಯ ಸೀರೆಯನು
ಕರದಿಂದ ಸೆಳೆಯುತಿರೆ ಪತಿಗಳೆಲ್ಲ
ಗರಹೊಯ್ದಂತಿದ್ದರಲ್ಲದೇ ನರಹರಿಯೆ
ಕಾರುಣ್ಯದಿಂ ನೀನಲ್ಲದಿನ್ನಾರು ಕಾಯ್ದವರು || 1 ||

ಅಂದು ನೆಗಳಿನ ಬಾಧೆಯಿಂದ ಗಜರಾಜನನು
ತಂದೆ ನೀ ವೈಕುಂಠದಿಂದ ಬಂದು
ಇಂದಿರೇಶನೆ ಚಕ್ರದಿಂದ ನೆಗಳಿನ ಬಾಯ
ಸಂಧಿಯನು ಸೀಳಿ ಪೊರೆದೆಯಲೊ ನರಹರಿಯೆ || 2 ||

ಅಜಮಿಳನು ಕುಲಗೆಟ್ಟು ಕಾಲದೂತರು ಬರಲು
ನಿಜಸುತನ ಕರೆಯೆ ನೀನತಿವೇಗದಿ
ತ್ರಿಜಗದೊಡೆಯನೆ ಪುರಂದರ ವಿಠಲ ಕರುಣದಲಿ
ನಿಜದೂತರನು ಕಳುಹಿ ಕಾಯ್ದೆ ಗಡ ಹರಿಯೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ದ್ರುಪದಜೆ** = ದ್ರೌಪದಿ

**ದುರುಳ ಕೌರವರು** = ದುಶ್ಶಾಸನನು … ದ್ರೌಪದಿಯ ವಸ್ತ್ರಾಪಹರಣ ಪ್ರಸಂಗ

**ಗರಹೊಯ್ದವರಂತೆ** = ದೆವ್ವ ಬಡಿದವರಂತೆ

**ನೆಗಳು** = ಮೊಸಳೆ (ಗಜೇಂದ್ರ ಮೋಕ್ಷ)

**ಕುಲಗೆಟ್ಟು** = ಶೂದ್ರಸ್ತ್ರೀ ಸಹವಾಸ ಮಾಡಿ

**ಕಾಲದೂತ** = ಯಮದೂತ

**ನಿಜಸುತ** = ನಾರಾಯಣನೆಂಬ ತನ್ನ ಮಗ (ನಾರಗ)

**Classification:** Keerthane
**Ankita:** purandara vittala
**Location:** NA
**Category:** Pooja Tatva,
**Sub-Category:** karuna, Krishna, virakti, kai, kourava, draupadi, pati, pandava, narasimha, mosale, gaja, vaikunta, chakra, bayi, ajamila, yama, putra, Narayana, vishnu,
**Pravachana:** NA
**Explanation:** NA